## ದಿನಾಂಕ: 28-2-2009 ರಂದು ಸಾಯಂಕಾಲ 4-00 ಗಂಟೆಗೆ ನಡೆದ ಅಂಕೋಲಾ ಪಟ್ಟಣ ಪಂಚಾಯತದ ಸಾಮಾನ್ಯ ಸಭೆಯ ನಡವಳಿಕೆಗಳು

### ಹಾಜರಿದ್ದ ಸದಸ್ಯರು.

| | |
|---|---|
| 1.) ಫರ್ನಾಂಡೀಸ ಜವೇಲಾ ಸಾವೇರ | – ಅದ್ಯಕ್ಷರು |
| 2) ಅನಿತಾ ಕೃಷ್ಣಾನಂದ ಬಂಟ | –ಉಪಾದ್ಯಕ್ಷರು |
| 3) ಬಂಟ ಚಂದ್ರಕಾಂತ ಚುಡಾಮಣಿ | – ಸದಸ್ಯರು |
| 4) ಸವಿತಾ ಸೋಮು ಗೌಡಾ | – ‘’ |
| 5) ರಾಜೇಂದ್ರ ವಿ. ನಾಯ್ಕ | – ‘’ |
| 6) ಜಿ.ಎ.ಮಹಾಲಕ್ಷ್ಮೀ ಲಕ್ಷ್ಮೀ ನರಸಯ್ಯ | – „ |
| 7) ಶೇಖ ಸಮಶಾದ ಅಜಮುದ್ದಿನ ಶೇಖ | – „ |
| 8) ಗೋಪಾಲಕೃಷ್ಣ(ನಾಗೇಂದ್ರ) ಚೆನ್ನಪ್ಪ ನಾಯ್ಕ | |
| 9) ಅಜಿತ ಪೀರು ನಾಯ್ಕ | – ‘’ |
| 10) ಅರುಣ ದಯಾನಂದ ನಾಡಕರ್ಣಿ | – ‘’ |
| 11) ಸದಾನಂದ ಕುಪ್ಪಯ್ಯ ಗುಡಿಗಾರ | – „ |
| 12) ಭಾಸ್ಕರ ಕೆ. ನಾರ್ವೇಕರ | – „ |
| 13) ಕೃಷ್ಣಕುಮಾರ ವೆಂಕಟೇಶ ಮಹಾಲೆ | – „ |

### ಚರ್ಚಿಸತಕ್ಕ ವಿಷಯಗಳು

ವಿಷಯ ನಂ. 1 ದಿನಾಂಕ 21-1-2009ರಂದು ಜರುಗಿದ ಸಾಮಾನ್ಯ ಸಭೆಯ ಹಾಗೂ ವಿಶೇಷ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.

ಠರಾವ ನಂ. 116 ಎಸ.ಎಫ.ಸಿ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳು ಕ್ರಿಯಾಯೋಜನೆಯಲ್ಲಿ ಕೆಲವು ಕಾಮಗಾರಿಗಳನ್ನು ಬದಲಾವಣೆ ಮಾಡಿ ಠರಾವನಂ. 100 ದಿನಾಂಕ: 21/01/2009 ರಂತೆ ಪಾಸು ಮಾಡಿರುವುದನ್ನು ದೃಢೀಕರಣ ಮಾಡುವ ವಿಷಯದಲ್ಲಿ ಅ. ನಂ. 10 ರಲ್ಲಿ ಸೆಸ್‌ಪ್ಯುಲರ್ ವಾಹನ ಖರೀದಿಯಲ್ಲಿ ಕಾಯ್ದಿರಿಸಿದ ಹಣ ರೂ. 19.40 ಲಕ್ಷಗಳಿಗೆ ಈ ಕೆಳಗಿನಂತೆ ತಿದ್ದುಪಡಿ ಮಾಡಿ ಠರಾವು ಪಾಸು ಮಾಡಲಾಯಿತು.

| ಅ.ನಂ. | ಕಾಮಗಾರಿಗಳ ವಿವರ | ಅಂದಾಜು ರಕಂ ( ಲಕ್ಷಗಳಲ್ಲಿ) |
|---|---|---|
| 1 | ಅಂಬಾರಕೊಡ್ಲ ಶಂಕರಗೌಡರ ಮನೆಯ ಹತ್ತಿರ ಸಾರ್ವಜನಿಕ ಬಾವಿ ನಿರ್ಮಾಣ | 1.50 |
| 2 | ಅಂಬಾರಕೊಡ್ಲ ವಿದ್ಯಾಮಂದಿರದ ಹತ್ತಿರ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 3. | ಅಂಬಾರಕೊಡ್ಲ ಮಂಗು ಹನುಮಾ ಗೌಡರ ಮನೆಯ ಹತ್ತಿರ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 4. | ಕೋಟೆವಾಡಾ ಪೂರ್ಣಪ್ರಜ್ಞಾ ಶಾಲೆಯ ಆವರಣದಲ್ಲಿ ಸಾರ್ವಜನಿಕ ಬಾವಿ ನಿರ್ಮಾಣ | 1.00 |
| 5. | ಹುಲಿದೇವರವಾಡಾ ಗೌಡರಕೇರಿಯಲ್ಲಿ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 6. | ಕಲಭಾಗದಲ್ಲಿ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 7. | ಅಂಬಾರಕೊಡ್ಲ ಕರಿ ದೇವಸ್ಥಾನದ ಹತ್ತಿರ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 8. | ಗುಡಿಗಾರಗಲ್ಲಿ ಜಮೀರ ಮನೆ ಹತ್ತಿರ ಸಾರ್ವಜನಿಕ ಬಾವಿ ನಿರ್ಮಾಣ | 1.25 |
| 9 | ಸ್ಮಶಾನ ಸೇರುವ ರಸ್ತೆಯಲ್ಲಿ ಡಾಂಬರೀಕರಣ ನಿರ್ಮಿಸುವುದು. | 0.75 |
| 10 | ಕುಲಕರ್ಣಿ ಕಂಪೌಂಡ ರಸ್ತೆಯಿಂದ 100 ಮೀಟರನಿಂದ ಮುಂದೆ ಕಾಂಕ್ರೀಟ ರಸ್ತೆಯನ್ನು ನಿರ್ಮಿಸುವುದು. | 2.40 |
| 11 | ಕೇಣಿ ರಸ್ತೆಯ ಪರಮಾಣ ಕಟ್ಟೆಯಿಂದ ಮುಂದೆ ರಸ್ತೆ ಅಗಲೀಕರಣ ಮಾಡಿ ಮೆಟಲಿಂಗ ಮಾಡುವುದು. | 5.00 |
| 12 | ರಥಬೀದಿಯಿಂದ ಕಾರವಾರ ರಸ್ತೆ ಸೇರುವ ರಸ್ತೆ ಡಾಂಬರೀಕರಣ ಮಾಡುವುದು. | 1.25 |
| | | **19.40** |

ಸದ್ರಿ ಈ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ತಯಾರಿಸಿದ ಕ್ರಿಯಾಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ರವರಿಂದ ಅನುಮೋದನೆಯನ್ನು ಪಡೆಯುವಂತೆ ನಿರ್ಣಯಿಸಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ: ಅರುಣ ಡಿ. ನಾಡಕರ್ಣಿ
ಅ: ಮಹಾಲಕ್ಷ್ಮೀ ಲಕ್ಷ್ಮೀನರಸಯ್ಯ

ವಿಷಯನಂ.-2 ದಿನಾಂಕ 11-2-2009 ರಂದು ಜರುಗಿದ ಸ್ಥಾಯಿಸಮಿತಿ ಸಭೆಯ ಠರಾವುಗಳನ್ನು ದೃಢೀಕರಿಸುವುದು.

ಠರಾವು ನಂ.117 ದಿನಾಂಕ 11-2-2009 ರಂದು ಜರುಗಿದ ಸ್ಥಾಯಿಸಮಿತಿ ಸಭೆಯ ಠರಾವುಗಳನ್ನು ಓದಿ ದೃಢೀಕರಿಸಲಾಯಿತು.

ವಿಷಯನಂ.-3 ಜನವರಿ 2009 ಜಮಾ-ಖರ್ಚು ಪರೀಸೀಲಿಸಿ, ಮಂಜೂರಿ ನೀಡುವದು.

ಠರಾವು ನಂ.118 ಜನವರಿ2009ರ ಜಮಾ-ಖರ್ಚನ್ನು ಸಭೆಯಲ್ಲಿ ಓದಿ ಪರೀಶೀಲಿಸಲಾಯಿತು. ಅದರಂತೆ ಈ ಕೆಳಗಿನ ಸಂಕ್ಷಿಪ್ತ ಮಾಹಿತಿಯುಳ್ಳ ಜಮಾ-ಖರ್ಚಿಗೆ ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಅಂಗೀಕರಿಸಲಾಯಿತು.

| | |
|---|---|
| 1) ಆರಂಭದ ಶಿಲ್ಕು | ರೂ. 4381864-31 |
| 2) ತಿಂಗಳ ಜಮಾ | ರೂ. 1040015-00 |
| 3) ಅಂತೂ ಜಮಾ | ರೂ. 5421879-31 |
| 4)ತಿಂಗಳ ಖರ್ಚು | ರೂ. 1416590-00 |
| 5) ಕೊನೆಯ ಶಿಲ್ಕು | ರೂ. 4005289-31 |

ಸೂ: ಅರುಣ ಡಿ. ನಾಡಕರ್ಣಿ
ಅ: ಭಾಸ್ಕರ ನಾರ್ವೆಕರ



ವಿಷಯ ನಂ.-4 2008-2009ಸಾಲಿನ ಪರಿಷ್ಕೃತ ಹಾಗೂ 2009-2010ನೇ ಸಾಲಿನ ಆಯ-ವ್ಯಯ ಅಂದಾಜು ಪತ್ರಿಕೆಗೆ ಮಂಜೂರಾತಿ ನೀಡುವ ಕುರಿತು.

ಠರಾವು ನಂ.119 ಸನ್ 2009-2010ನೇ ವರ್ಷದ ಆಯ-ವ್ಯಯ ತಯಾರಿಸಿ, ಮಂಡಿಸಿದ್ದನ್ನು ಹಾಗೂ ಅದಕ್ಕೆ ಪೂರಕವಾಗಿರುವ ಎಲ್ಲಾ ದಾಖಲೆಗಳನ್ನು ಪರೀಶೀಲಿಸಲಾಯಿತು. ಸದ್ರಿ ಆಯ-ವ್ಯಯದ ಸಾರಾಂಶ

ಪಟ್ಟಿಯ ಅನ್ವಯ ಪ್ರಾರಂಬವಾದ ನಗದು ಹಾಗೂ ಬ್ಯಾಂಕ ಶಿಲ್ಕುಗಳ ಪ್ರತಿಯಾಗಿ ಮುಂಬರುವ ವರ್ಷದ ಆಯ-ವ್ಯಯ ಅಂದಾಜು ರೂ. 36687ಸಾವಿರ ಇದ್ದು ,ರಾಜಸ್ವ ಖಾತೆಯ ಪ್ರತಿಯಾಗಿ ಬರಬಹುದಾದ ಸ್ವೀಕೃತಿಗಳು 18175ಸಾವಿರ ಹಾಗೂ ಅದಕ್ಕೆ ಕುರಿತಂತೆ ಪಾವತಿಸಲು ಬರಬಹುದಾದ ಮೊತ್ತ 18029 ಸಾವಿರ ಇರುತ್ತದೆ. ಅದೇ ರೀತಿಯಾಗಿ ಬಂಡ-

ವಾಳ ಖಾತೆಯ ಪ್ರತಿಯಾಗಿ ಬರಬಹುದಾದ ಸ್ವೀಕೃತಿ ಯಾವುದೇ ಇರುವುದಿಲ್ಲ. ಮತ್ತು ಸದ್ರಿ ಖಾತೆಯಪ್ರತಿಯಾಗಿ ಬರಬಹುದಾದಖರ್ಚು 26135ಸಾವಿರ ಎಂದು ನಮೂದಿಸಲಾಗಿರುತ್ತದೆ. ಅದೇ ರೀತಿಯಾಗಿ ಅಸಾಧಾರಣ ಖಾತೆಯ ಪ್ರತಿಯಾಗಿ ಸ್ವೀಕೃತಿಯ ಮೊತ್ತವನ್ನು 401056 ಎಂದು ತೋರಿಸಲಾಗಿದ್ದು,ಅದರ ಪ್ರತಿಯಾಗಿ ಪಾವತಿಸಬಹುದಾದ ಅಂದಾಜು ಮೊತ್ತ 14051

ತೋರಿಸಲಾಗಿದೆ. ಪ್ರಯಕ್ತ ಎಲ್ಲಾ ಖಾತೆಗಳಿಗೆ ಒದಗಿಸಿದ ಮೊತ್ತಗಳಲ್ಲಿ ಸ್ವೀಕೃತಿ ಮತ್ತು ಪಾವತಿ ಗಳ ಮೊತ್ತಗಳನ್ನು ತಳೆ ಮಾಡಲಾಗಿ, ಅಂತಿಮ ಶಿಲ್ಕಿನಲ್ಲಿ ಒಟ್ಟೂ ಹೆಚ್ಚುವರಿಮೊತ್ತ 116ಸಾವಿರ

ಆಗುತ್ತಿದ್ದುಈ ವರ್ಷದ ಬಜೆಟ ಆಯ-ವ್ಯಯ ಇದ್ದು ಹೆಚ್ಚುವರಿ ಆಯ-ವ್ಯಯ ಆಗಿರುತ್ತದೆ.

ಈ ಎಲ್ಲಾ ಅಂಕ ಅಂಶಗಳು ಹಾಗೂ ಆಯ-ವ್ಯಯದ ಒಟ್ಟೂ ವಿಸ್ತೀತ ಅಂಕಅಂಶಗಳನ್ನು ಸಭೆಯಲ್ಲಿ ಸುದೀರ್ಘವಾಗಿ ಪರೀಶೀಲಿಸಲಾಯಿತು. ಹಾಗೂಸದ್ರಿ ಆಯ-ವ್ಯಯ2009-2010ಕ್ಕೆ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು ಎಂದು ಠರಾವುಅಂಗೀಕರೀಸಲಾಯಿತು.

ಸೂ: ಅರುಣ ಡಿ. ನಾಡಕರ್ಣಿ

ಅ: ಅಜಿತ. ಪಿ. ನಾಯ್ಕ

ವಿಷಯ ನಂ.5 ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ನಿರ್ಮಿಸಿದ ಮೊದಲನೆಯ ಮಹಡಿಯಲ್ಲಿ ಹಾಗೂ ಮಂಜಗೂಣಿರಸ್ತೆಯಲ್ಲಿ ಒಂದು ಮಳಿಗೆಯ ಹರಾಜು ಮಾಡುವ ಬಗ್ಗೆ ಚರ್ಚಿಸುವದು.

ಠರಾವನಂ.120 ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿಬಾಕಿಉಳಿದ ಎರಡುಮಳಿಗೆಗಳನ್ನು ಹಾಗೂ ಎಸ್. ಎಫ.ಸಿ.ಯೋಜನೆಯಡಿಯಲ್ಲಿ ಮಂಜೂಗೂಣಿರಸ್ತೆಯಲ್ಲಿ ನಿರ್ಮಿಸಿದ ಒಂದು ಮಳಿಗೆಯನ್ನು ನಿರ್ಮಿಸಿ ಒಂದು ತಿಂಗಳು ಮುಗಿದಿರುವದರಿಂದ ಸದ್ರಿ ಮಳಿಗೆಗಳನ್ನು ಸರ್ಕಾರದ ಸುತ್ತೋಲೆ ಯಂತೆ ಹರಾಜು ಮಾಡುವ ಕುರಿತು,ಈ ಸಭೆಯಲ್ಲಿ ಚರ್ಚಿಸಲಾಗಿ, ಮಾರ್ಚ ತಿಂಗಳಲ್ಲಿ ಚುನಾವಣೆ ನೀತಿ ಸಂಹಿತೆ ಜ್ಯಾರಿಯಲ್ಲಿ ಬರುವ ಪ್ರಯುಕ್ತ ಚುನಾವಣೆ ಮುಗಿದು ಮೇಲೆ ಟೆಂಡರ ಕರೆದು ನೀಡುವಂತೆ ಸಭೆಯುಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ: ಭಾಸ್ಕರ ನಾರ್ವೇಕರ

ಅ: ಅಜಿತ. ಪಿ. ನಾಯ್ಕ

ವಿಷಯ ನಂ.6 ತರಕಾರಿ ಮತ್ತು ಮೀನು ಮಾರ್ಕೆಟ ಹಾಗೂ ಚಿಕನ ಮತ್ತು ಮಟನ ಸ್ಟಾಲ ಬಗ್ಗೆ ಬಂದ ಟೆಂಡರುಗಳನ್ನು ಅನುಮೋದಿಸುವ ಕುರಿತು ಚರ್ಚಿಸುವದು.

ಠರಾವನಂ.121 ತರಕಾರಿ ಮತ್ತು ಮೀನು ಮಾರ್ಕೆಟ ಹಾಗೂ ಚಿಕನ ಮತ್ತು ಮಟನ ಸ್ಟಾಲ ಬಗ್ಗೆಬಂದ ಟೆಂಡರುಗಳನ್ನು ಮುಕ್ಯಾಧಿಕಾರಿಗಳು ಸಭೆಯ ಗಮನಕ್ಕೆ ತರಲಾಯಿತು. ಅದರಂತೆ ಸಂಕಿಪ್ತ ಮಾಹಿತಿಯುಳ್ಳ ಟೆಂಡರ ದರಗಳು ಸಭೆಯು ಪರೀಶೀಲಿಸಿತು.



| ಕ್ರ.ಸಂ. | ಬಿಡ್‌ದಾರರ ಹೆಸರು | ತರಕಾರಿ | ಮೀನು | ಮಟನ ಸ್ಟಾಲ | ಚಿಕನ ಸ್ಟಾಲ |
|---|---|---|---|---|---|

| | | ಮಾರ್ಕೆಟ ಫೀ ವಸೂಲಿ ಗುತ್ತಿಗೆ ಹಕ್ಕು | ಮಾರ್ಕೆಟ ಫೀ ವಸೂಲಿ ಗುತ್ತಿಗೆ ಹಕ್ಕು | ಸ್ಟಾಲ ನಂ. 1 | ಸ್ಟಾಲ ನಂ. 2 | ಸ್ಟಾಲ ನಂ. 3 | ಸ್ಟಾಲ ನಂ. 1 | ಸ್ಟಾಲ ನಂ. 2 | ಸ್ಟಾಲ ನಂ. 3 |
|---|---|---|---|---|---|---|---|---|---|
| 1 | ಶ್ರೀ ಗಣೇಶ ರಮಕಾಂತ ನಾಯ್ಕ | | | | | | | | |
| 2. | ಶ್ರೀ ಸುಬ್ರಾಯ ಬಳಗು ನಾಯ್ಕ | 7,54,999/– | | | | | | | |
| 3. | ಶ್ರೀ ಮುರ್ಕುಂಡಿ ಪಿ. ನಾಯ್ಕ | | 6,16,399/– | | | | | | |
| 4. | ಶ್ರೀಮತಿ ಜ್ಯೋತಿ ಶ್ಯಾಮ ಖಾರ್ವಿ | | | | | | | | |
| 5. | ಶ್ರೀ ಗುರುನಾಥ ಶಂಕ್ರಪ್ಪ ಕಲಾಲ್ | | | | 2800/– | | | | |
| 6. | ಶ್ರೀ ಪ್ರಕಾಶ ಚಂದ್ರಪ್ಪ ಕಲಾಲ್ | | | 3700/– | | | | | |
| 7. | ಶ್ರೀ ಗುರುನಾಥ ಎಗಪ್ಪ ಕಲಾಲ್ | | | | | 3030/– | | | |
| 8. | ಶ್ರೀ ರಾಜು ಪ್ರದಾನಪ್ಪ ಕಲಾಲ್ | | | | | | | | |
| 9. | ಶ್ರೀ ರವಿ ವಸಂತ ನಾಯ್ಕ | | | | | | 635/– | | |
| 10. | ಶ್ರೀ ನಿರಂಜನ ಆರ. ನಾಯಕ | | | | | | | 610/– | |
| 11. | ಶ್ರೀ ಪ್ರದೀಪ ಎನ್. ನಾಯಕ | | | | | | | | 590/– |

ತರಕಾರಿ ಮತ್ತು ಮೀನು ಮಾರುಕಟ್ಟೆಯ ಫೀ ವಸೂಲಿ ಹಕ್ಕು ಗುತ್ತಿಗೆ ಹಾಗೂ ಮಟನ ಸ್ಟಾಲ ನಂ. 1 ಮತ್ತು 2 ಚಿಕನ್ ಸ್ಟಾಲ ನಂ. 1 ರಿಂದ 3 ಪಂಚಾಯತ ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿನ ದರ ಬಂದಿದ್ದು, ಸಮಧಾನಕರವಾಗಿರುತ್ತದೆ. ಮಟನ ಸ್ಟಾಲ ನಂ. 3ಕ್ಕೆ ಬಂದ ದರವು ಪ್ರತಿ ತಿಂಗಳಿಗೆ ಕಳೆದ ವರ್ಷಕ್ಕಿಂತ ರೂ. 2480=00 ( ಎರಡು ಸಾವಿರದ ನಾಲ್ಕು ನೂರು ಎಂಬತ್ತು ಮಾತ್ರ) ಕಡಿಮೆ ಬಂದಿರುವುದರಿಂದ ಈ ಸ್ಟಾಲಿಗೆ ಮರು ಹರಾಜು ಮಾಡಲು ಸಭೆಯಯ ಮುಖ್ಯಾಧಿಕಾರಿಗಳಿಗೆ ಸೂಚಿಸಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.



ವಿಷಯ ನಂ.7 ಸರಕಾರಿ ದವಾಖಾನೆಗೆ ನಿರಂತರ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ಚರ್ಚಿಸುವದು.

ಠರಾವುನಂ.122 ಅಂಕೋಲಾ ಪಟ್ಟಣದಲ್ಲಿ ಅತಿ ಕಡು ಬಡವರಿಗೆ ವೈದ್ಯಕೀಯ ಸೌಲಭ್ಯ ಪಡೆಯುವ ಏಕೈಕ ಸರಕಾರಿ ದವಾಖಾನೆ ಆಗಿರುವುದರಿಂದ ಈ ದವಾಖಾನೆಗೆ ಗ್ರಾಮೀಣ ಹಾಗೂ ನಗರದಿಂದ ಹೆಚ್ಚಿನ ಬಡ ಜನರು ಒಳ ರೋಗಿಗಳಾಗಿ ಸೇವೆ ಪಡೆಯುತ್ತಿರುವುದರಿಂದ ರೋಗಿಗಳಿಗೆ ದಿನನಿತ್ಯದ ಉಪಯೋಗಕ್ಕೆ ನೀರಿನ ಸೌಲಭ್ಯ ಇಲ್ಲದೇ ಇರುವುದರಿಂದ ಮಾನ್ಯ ಮೀನುಗಾರಿಕಾ ಸಚಿವರಾದ ಆನಂದ ಅಸ್ನೋಟಿಕರ ಇವರು ಕೂಡಲೇ ಸರಕಾರಿ ದವಾ –

ಖಾನೆಗೆ ನಿರಂತರ ನೀರಿನ ಸೌಲಭ್ಯವನ್ನು ಮಾಡಲು ತಿಳಿಸಿರುವುದರಿಂದ ನಗರದ ಮುಖ್ಯ ಕೊಳುವೆಯಿಂದ 75ಎಂ.ಎಂ. ವ್ಯಾಸದ ಪೈಪ ವಿಸ್ತರಿಸಿ ನೀರಿನ ಸೌಲಭ್ಯ ವ್ಯವಸ್ಥೆ ಮಾಡಲು ಸಭೆಯು ಸೂಚಿಸಿತು. ಹಾಗೂ ಸದರ ಕಾಮಗಾರಿಗೆ ತಗಲುವ ವೆಚ್ಚ ರೂ. 0.75 ಲಕ್ಷ ಪಾವತಿಸಲು ಸಭೆಯು ಒಪ್ಪಿಗೆ ನೀಡಿ ಠರಾವ ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯ ನಂ.8 ಕಾಮತ ಉಪಚಾರಕ್ಕೆ ನೀರಿನ ಜೋಡಣೆಯನ್ನು ಸ್ಥಗಿತಗೊಳಿಸುವ ಬಗ್ಗೆ ಚರ್ಚಿಸುವದು.

ಠರಾವುನಂ.123 ನಗರ ನೀರು ಸರಬರಾಜು ಇಲಾಖೆಯವರು ಕಾಮತ ಉಪಚಾರಕ್ಕೆ ಮುಖ್ಯ ನೇರವಾಗಿ ಜೋಡಣೆ ನೀಡಿರುವುದರಿಂದ ಪಟ್ಟಣ ಪಂಚಾಯತದ ಜಲಸಂಗ್ರಹಾಲಯದ ನೀರಿನ ಒತ್ತಡ ಕಡಿಮೆ ಆಗುತ್ತಿರುವುದರಿಂದ ಕೂಡಲೇ ಬಂದು ಮಾಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಪತ್ರ ಬರೆಯಲು ಸೂಚಿಸಿ ಠರಾವು ಪಾಸು ಮಾಡ–ಲಾಯಿತು.

ವಿಷಯ ನಂ.9 ಪಟ್ಟಣ ಪಂಚಾಯತ ನಿಧಿಯಿಂದ ನಿರ್ವಹಿಸಿದ ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ ಚರ್ಚಿಸುವದು.

ಠರಾವುನಂ.124 ಪಟ್ಟಣಪಂಚಾಯತ ನಿಧಿಯಿಂದ ಈಗಾಗಲೇ ತುರ್ತು ಕಾಮಗಾರಿಗಳನ್ನಾಗಿ ನಿರ್ವಹಿಸಿದ್ದನ್ನು ಸಾಮಾನ್ಯ ಸಭೆಯ ಮಂಜೂರಾತಿಪಡೆಯದೇ ಇರುವದರಿಂದ ಈ ಕೆಳಗಿನಕಾಮಗಾರಿಗಳನ್ನು ಪಟ್ಟಣಪಂಚಾಯತನಿಧಿಯಿಂದ ನಿರ್ವಹಿಸಿದ್ದಕ್ಕೆ ಮಂಜೂರಾತಿಯನ್ನು ನೀಡುವಂತೆ ಸಾಮಾನ್ಯ ಸಭೆಯಲ್ಲಿ ಮುಖ್ಯಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಅದರಂತೆ ಕ್ರಮಸಂಖ್ಯೆ 1ರಿಂದ 9 ಕ್ಕೆ ಮಂಜೂರಾತಿ ನೀಡಲಾಯಿತು. ಹಾಗೂ ತೂರ್ತಾಗಿ ನೀರಿನ ಅಭಾವ ಇರುವದರಿಂದ ಈ ಕೆಳಗಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೆರೆದ ಬಾವಿಯನ್ನು ಪಟ್ಟಣ ಪಂಚಾಯತನಿಧಿ ಯಿಂದ ನಿರ್ವಹಿಸಲು ಸಭೆಯಲ್ಲಿ ಮಂಜೂರಾತಿಯನ್ನು ನೀಡಲಾಯಿತು.

1) ಅಂಕೋಲಾ ಎನ್.ಎಚ್.–17ರ ಹತ್ತಿರ ಅತಿಕ್ರಮಿಸಿದ ರಸ್ತೆಯ ಮಣ್ಣನ್ನು ಹರಡುವದು. ........................................................................ರೂ.80,000=00
2) ಅಂಬಾರಕೊಡ್ಲ ಮಸೀದಿಯ ಹತ್ತಿರ ರಸ್ತೆಗೆ ಕಾಂಕ್ರಿಟ ರಸ್ತೆ ನಿರ್ಮಾಣ ___________________________________ರೂ. 52,000=00
3) ಕೋಟಿವಾಡಾ ರಾಮಾ ಜಟ್ಟಿ ನಾಯ್ಕ ಮನೆ ಸೇರುವ ರಸ್ತೆ ಯಲ್ಲಿ ಕಂಕ್ರೀಟ ರಸ್ತೆ ನಿರ್ಮಾಣ _______________..ರೂ. 70,000=00
4) ಬಸ್ ಶೆಲ್ಟರ ಹಾಗೂ ವಾಣಿಜ್ಯ ಮಳಿಗೆಗಳಿಗೆ ವಿದ್ಯುತ್ತ ಸಂಪರ್ಕವನ್ನು ನೀಡುವದು. .............................................ರೂ. 30,000=00
5) ಅಂಬಾರಕೊಡ್ಲ ಸಮುದಾಯಭವನಕ್ಕೆ ವಿದ್ಯುತ್ತಿಕರಣಮಾಡುವದು 1,02,000=00
6) ಹುಲಿದೇವರವಾಡಾ ಶೌಚಾಲಯಕ್ಕೆ ವಿದ್ಯುತ್ತಿಕರಣಮಾಡುವದು ರೂ. 52,000=00

6

7) ಎಸ್.ಎಫ.ಸಿ. ಯೋಜನೆಯಡಿಯಲ್ಲಿ ಹೆಚ್ಚುವರಿ ಕಾಮಗಾರಿ ನಿಕರ್ವಹಿಸಿದ ಪೌರಕಾರ್ಮಿಕರ ವಸತಿ ನಿಲಯ, ಶೌಚಾಲಯ, ಅಂಬಾರಕೊಡ್ಲ ಸಮುದಾಯ ಭವನ ಹಾಗೂ ವಾಹನ ಶೆಡ್ಡನ್ನು ನಿರ್ಮಿಸಿದ್ದು ಸಧ್ರಿ ಸಂದಾಯ ಮಾಡಿದ ಬಿಲ್ಲು ಮಂಜೂರಾತಿಯನ್ನು ನೀಡುವದು. ––
8) ನೀರು ಸರಬರಾಜು ಕಾಮಗಾರಿಯಲ್ಲಿ ಮಸೀದಿಯ ಹತ್ತಿರ ಪೈಪಲೈನ ವಿಸ್ತರಣೆ.......................................................ರೂ. 38,000=00
9) ಕೋಟಿವಾಡಾ ಖಲಾಲ ಮನೆ ಜಾಗಾ ಮುಂದೆ ರೂ. 26,000=00

10) ಅಂಬಾರಕೊಡ್ಲ ಸಾರ್ವಜನಿಕ ಬಾವಿಗೆ ಪ್ಲಾಟಫಾರ್ಮ ಅಳವಡಿಸುವದು. ರೂ. 25,000=00

ಸದ್ರಿ ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡಿ, ಠರಾವು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸೂ. ಅರಣ ಡಿ. ನಾಡಕರ್ಣಿ,
ಅ : ಅಜಿತ ಪಿ. ನಾಯ್ಕ

ವಿಷಯ ನಂ. 10 — ನಗರ ಪ್ರದೇಶದಲ್ಲಿ ನೀರಿನ ಟ್ಯಾಂಕರ ಸರಬರಾಜು ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

ಠರಾವ ನಂ. 125 — ಪಟ್ಟಣ ಪ್ರದೇಶದ ಎತ್ತರ ಪ್ರದೇಶಗಳಾದ ಹುಲಿದೇವರವಾಡಾ, ಕೋಟೆವಾಡಾ, ಆನಂದಗಿರಿ, ಪುರ್ಲಕ್ಕಿಬೇಣದ ಕರಿಕಲ್ಲು ಬೊಳೆ ಹಾಗೂ ಅಂಬಾರಕೊಡ್ಲ, ಕೇಣಿ ಪ್ರದೇಶದಲ್ಲಿ ನೀರಿನ ಸಮಸ್ಯೆ ಇರುವುದರಿಂದ ಈ ಪಟ್ಟಣ ಪಂಚಾಯತ ವತಿಯಿಂದ ಬಾವಿ ಹಾಗೂ ಬೋರವೆಲ್ ಕೊರೆದು ಕಿರು ನೀರು ಸರಬರಾಜು ಯೋಜನೆ ಈ ಹಿಂದೆ ನಿರ್ಮಿಸಿರುವುದರಿಂದ ಮಾರ್ಚ ತಿಂಗಳಲ್ಲಿ ಬಾವಿಯಲ್ಲಿ ಹಾಗೂ ಬೋರವೆಲ್‌ಗಳಲ್ಲಿ ನೀರಿನ ಹುಟ್ಟುವಳಿ ಕಡಿಮೆ ಆಗುತ್ತಿರುವುದರಿಂದ ಸದರ ಪ್ರದೇಶಗಳಿಗೆ ತುರ್ತಾಗಿ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡುವುದು ಸೂಕ್ತವೆಂದು ಸಭೆಯು ಮನಗಂಡಿತು. ಹಾಗೂ ಬಾಕಿ ಇರುವ ಪ್ರದೇಶಗಳಲ್ಲಿಯೂ ಕೂಡ ನೀರಿನ ಸಮಸ್ಯೆ ಇರುವಲ್ಲಿ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡುವ ಬಗ್ಗೆ ಕೂಡಲೇ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ದರವಾರು ಕರೆದು ಕ್ರಮಕೈಗೊಳ್ಳುವಂತೆ ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ. ಅರಣ ಡಿ. ನಾಡಕರ್ಣಿ,
ಅ : ಭಾಸ್ಕರ ನಾರ್ವೇಕರ



**ವಿಷಯ ನಂ. 11** — ಪಟ್ಟಣದ ಮುಖ್ಯ ರಸ್ತೆಯಿಂದ ಕ್ರಾಸ ರಸ್ತೆಗೆ ಸೇರುವ ರಸ್ತೆಯ ಅಗಲೀಕರಣ ಬಗ್ಗೆ ಭೂಸ್ವಾಧೀನದ ಕುರಿತು ಚರ್ಚಿಸುವದು.

ಠರಾವ ನಂ. 126 — ಪಟ್ಟಣಪ್ರದೇಶದ ಕಲ್ಲಭಾಗ ರಸ್ತೆ ಮತ್ತು ಕಾಕರಮಠ ಮಂಜೂಳಾ ಭಟ್ಟ ಮನೆಯಿಂದ ಕಂತ್ರಿ ಸೇರುವ ರಸ್ತೆ ಹಾಗೂ ಸುಂದರನಾರಾಯಣ ದೇವಸ್ಥಾನದ ಕ್ರಾಸ ರಸ್ತೆಗಳಲ್ಲಿ ರಸ್ತೆಯ ಅನೂಕೂಲಕ್ಕಾಗಿ ಬೇಕಾದ ಜಾಗೆ ಯನ್ನು ಸ್ವಾಧೀನ ಪಡಿಸಿ ಕೊಳ್ಳುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಸದ್ರಿ ರಸ್ತೆಯ ಅಗಲೀಕರಣ ಮಾಡುವದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಚಾಲಕರಿಗೆ ಅನೂಕೂಲವಾಗುವ ಹಿನ್ನೆಲೆ
ಯಲ್ಲಿ ಸದ್ರಿ ಜಾಗೆಯ ನಕ್ಷೆ ಹಾಗೂ ಪಹಣಿಪತ್ರವನ್ನು ಪಡೆದು ಭೂಸ್ವಾಧೀನಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ಈ ಬಗ್ಗೆ ತಗಲುವ ವೆಚ್ಚವನ್ನು ಭೂಸ್ವಾಧೀನಕ್ಕಾಗಿ ಕಾಯ್ದಿರಿಸಿದ ಹಣದಲ್ಲಿ ವಿನಿಯೋಗಿಸುವಂತೆ ಸಭೆಯು ಮಂಜೂರಾತಿಯನ್ನು ನೀಡಿ, ಠರಾವು ಸರ್ವಾನುಮತದಿಂದ ಠರಾಯಿಸಲಾಯಿತು.

ಸೂ. ಅರಣ ಡಿ. ನಾಡಕರ್ಣಿ,

ಅ : ಅಜಿತ ಪಿ. ನಾಯ್ಕ

ವಿಷಯ ನಂ. 12 ಅಂಗಡಿ ಲೈಸನ್ಸ ಹೊಂದಿದ ಕೆಲವು ಕಟ್ಟಡಗಳು ಇಲ್ಲದೇ ಇರುವದನ್ನು ರದ್ದುಪಡಿಸಿ, ಲೈಸನ್ಸ ರದ್ದುಪಡಿಸುವ ಬಗ್ಗೆ ಕ್ರಮ ಜರುಗಿಸುವುದು.

ಠರಾವ ನಂ.–127 ಪಟ್ಟಣ ಪ್ರದೇಶದಲ್ಲಿ ಅತಿಕ್ರಮಣ ಖುಲ್ಲಾ ಪಡಿಸುವ ಸಂದರ್ಭದಲ್ಲಿ ಕೆಲವು ಅಂಗಡಿಗಳು ಸಂಪೂರ್ಣವಾಗಿ ನೆಲಸಮವಾಗಿರುವದರಿಂದ ಕೆಲವು ಅಂಗಡಿದಾರರು ಸಣ್ಣ ಪುಟ್ಟ ಅಂಗಡಿಗಳನ್ನು ಇಟ್ಟು ಈ ಕಾರ್ಯಾಲಯದಿಂದ ಲೈಸನ್ಸ ಪಡೆದು ವ್ಯವಹಾರ ಮಾಡುತ್ತಿರುವದರಿಂದ ಅಂತಹ ಅಂಗಡಿಗಳು ಬಂದಾಗಿರುವದರಿಂದ ಲೈಸನ್ಸ ಫೀ ರದ್ದುಪಡಿಸುವಂತೆ ಕಿರಿಯ ಆರೋಗ್ಯ ನೀರಿಕ್ಷಕರ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯು ಕೋರ್ಟ ವ್ಯಾಜ್ಯ ಇರುವ ಲೈಸನ್ಸದಾರರನ್ನು ಹೊರತುಪಡಿಸಿ,ಬಾಕಿ ಇರುವ ಲೈಸನ್ಸದಾರರಿಗೆ ಲೈಸನ್ಸ ಫೀ ಹಾಗೂ ಲೈಸನ್ಸ ರದ್ದು ಪಡಿಸಲು ಒಪ್ಪಿಗೆ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ. ಸದಾನಂದ ಗುಡಿಗಾರ

ಅ : ಅಜಿತ ಪಿ. ನಾಯ್ಕ

ವಿಷಯ ನಂ. 13 15ಡಸ್ಟಬಿನ ಖರೀದಿಸುವ ಬಗ್ಗೆ ಚರ್ಚಿಸುವದು.

ಠರಾವ ನಂ.–128 ಪಟ್ಟಣ ಪ್ರದೇಶದ ಹೋಟೇಲುಗಳಿಗೆ ತ್ಯಾಜ್ಯ ವಸ್ತುಗಳನ್ನು ಸಂಗ್ರಹಣೆ ಕುರಿತು ಡಸ್ಟಬಿನ್ ಖರೀದಿಸುವಂತೆ ಕಿರಿಯ ಆರೋಗ್ಯ ನೀರಿಕ್ಷರ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಹಾಗೂ ನಿರ್ಮಲ ವಿಭಾಗಕ್ಕೆ ಬೇಕಾಗಿರುವ ಡಸ್ಟಬಿನಗಳನ್ನು ಕಾನೂನಿನ ಪ್ರಕಾರ ದರವಾರು ಕರೆದು ಖರೀದಿಸಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ, ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

**8**

## ಮಾನ್ಯ ಆದ್ಯಕ್ಷರ ಅನುಮತಿಯ ಮೇರೆಗೆ ಬರಬಹುದಾದ ಇತರೇ ವಿಷಯಗಳು

ವಿಷಯ ನಂ. 14/1 2008–09 ನೇ ಸಾಲಿನಲ್ಲಿ ಎಸ್.ಎಫ.ಸಿ ಮುಕ್ತನಿಧಿಯಲ್ಲಿ ಬಿಡುಗಡೆಯಾದ ಹಣದಲ್ಲಿಮೂರು ಕಾಮಗಾರಿಗಳಿಗೆ ಬಂದ ಟೆಂಡರ ದರವನ್ನು ಅನುಮೋದಿಸುವ ಕುರಿತು.

ಠರಾವ ನಂ. 129 ಅಂಕೋಲಾ ಪಟ್ಟಣ ಪಂಚಾಯತಕ್ಕೆ 2008–09 ನೇ ಸಾಲಿನಲ್ಲಿ ಎಸ್.ಎಫ.ಸಿ ಮುಕ್ತನಿಧಿಯಲ್ಲಿ ಮಂಜೂರಾದ ಬಾಕಿ ಇರುವ ಈ ಕೆಳಗಿನ ಮೂರು ಕಾಮಗಾರಿಗಳಿಗೆ ದರವಾರು ಕರೆದ ಪ್ರಕಾರ ಗುತ್ತಿಗೆದಾರರು ಅಂದಾಜು ಪತ್ರಿಕೆ ದರಕ್ಕೆ ಟೆಂಡರ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸದರ ದರವನ್ನು ಸಭೆಯು ಮಂಜೂರ ಮಾಡಿತು. ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಸದರ ಕಾಮಗಾರಿ ನಿರ್ವಹಿಸುವಂತೆ ಸೂಚಿಸಿ ಠರಾವು ಪಾಸು ಮಾಡಲಾಯಿತು.

| ಅ. ನಂ. | ಕಾಮಗಾರಿಯ ಹೆಸರು | ಅಂದಾಜು ದರ (ರೂಲಕ್ಷಗಳಲ್ಲಿ) | ಟೆಂಡರ ದರ | ಟೆಂಡರ ಮಂಜೂರಾತಿ ನೀಡಬೇಕಾದ ಗುತ್ತಿಗೆದಾರರ ಹೆಸರು |
|---|---|---|---|---|
| 1 | 2 | 3 | 4 | 5 |
| 1 | ಮೀನು ಮಾರ್ಕೆಟಿನ ಹೊರ ಆವರಣ ಟೈಲ್ಸ ಅಳವಡಿಸುವುದು ಹಾಗೂ ಇತರೆ ಕೆಲಸಗಳಿಗಾಗಿ | 5.00 | ಅಂದಾಜು ಪತ್ರಿಕೆ ದರದಂತೆ | ಶ್ರೀ ನಾಗೇಶ ಬಿ. ನಾಯ್ಕ |
| 2. | ಕಚೇರಿಯ ಆವರಣದಲ್ಲಿ ರೆಸ್ಟರೂಮ್ ಮತ್ತು ಕಂಪ್ಯೂಟರ ರೂಮಗಳಿಗೆ ಮತ್ತು ನೀರಿನ | 7.85 | ಅಂದಾಜು ಪತ್ರಿಕೆ ದರದಂತೆ | ಶ್ರೀ ಉದಯ ಎನ್. ನಾಯ್ಕ |

| | | | | |
|---|---|---|---|---|
| | ವ್ಯವಸ್ಥೆಗಾಗಿ | | | |
| 3. | ನೀರಿನ ವ್ಯವಸ್ಥೆಗಳಿಗಾಗಿ ಕೇಣಿ,ಹೊನ್ನೆಕೇರಿ, ಆನಂದಗಿರಿ, ಕಂತ್ರಿ ಹಾಗೂಅಂಬಾರಕೊಡ್ಲ ಪ್ರದೇಶದಲ್ಲಿ 2 ಎಚ.ಪಿ ಸಾಮರ್ಥ್ಯದ ಪಂಪು ಅಳವಡಿಸಿ ಸಿಸ್ಟಿನ್ ಟ್ಯಾಂಕ ನಿರ್ಮಾಣ | 8.50 | ಅಂದಾಜು ಪತ್ರಿಕೆ ದರದಂತೆ | ಶ್ರೀ ಕುಮಾರ ಜಿ. ನಾಯ್ಕ |

ವಿಷಯ ನಂ. 14/2 ಸಿ.ಆಯ್. ವಾಲ್ವ ಖರೀದಿಸುವ ಬಗ್ಗೆ .

ಠರಾವ ನಂ.130 ನಗರ ಪ್ರದೇಶದಲ್ಲಿ ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿ ಸಿ.ಆಯ್ ವಾಲ್ವಗಳು ನಾದುರಸ್ಥಿ ಆಗಿರುವುದರಿಂದ ಅಲ್ಲಿಯ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆ ಆಗುತ್ತಿರುವುದರಿಂದ ನಾದುರುಸ್ಥಿ ಆಗಿರುವ ವಾಲ್ವಗಳನ್ನು ಬದಲಿಸಲು ಈ ಕೆಳಗೆ ವಿವರಿಸಿದ ಪ್ರಕಾರವಾಗಿ ಸಿ.ಆಯ್ ವಾಲ್ವಗಳನ್ನು
ಸ್ಥಳೀಯ ದಿನಪತ್ರಿಕೆಯಲ್ಲಿ ದರವಾರು ಕರೆದು ಖರೀದಿಸಲು ಒಪ್ಪಿಗೆ ನೀಡಿದ ಠರಾವು ಪಾಸಾಯಿತು.

100 ಸಿ.ಆಯ್ ವಾಲ್ವ – 3
80 ಸಿ.ಆಯ ವಾಲ್ವ – 3
65 ಸಿ.ಆಯ. ವಾಲ್ವ – 6
50 ಸಿ.ಆಯ ವಾಲ್ವ – 5

9

ವಿಷಯ ನಂ. 14/3 ಆನಂದಗಿರಿ ಪ್ರದೇಶಕ್ಕೆ 5ಎಚ್.ಪಿ. ಅಶ್ವಶಕ್ತಿಯ ಪಂಪ ಕೂಡ್ರಿಸಲು ಜೈನ ಎಲೆಕ್ಟ್ರಿಕ ಅಂಕೋಲಾ ಇವರಿಗೆ ಠೇವಣಿ ಹಾಗೂ ಟಿ.ಸಿ. ಬಾಬ್ತು ರೂ. 1,66,609=00 ನೀಡುವ ಕುರಿತು.

ಠರಾವ ನಂ. 131 ಆನಂದಗಿರಿ ಪ್ರದೇಶದಲ್ಲಿ ಯಾವುದೇ ತರಹದ ಕುಡಿಯವ ನೀರಿನ ವ್ಯವಸ್ಥೆ ಇಲ್ಲದೇ ಇರುವುದರಿಂದ ಎಸ.ಎಫ.ಸಿ ಯೋಜನೆಯಲ್ಲಿ ಸದರ ಕಿರು ನೀರು ಸರಬರಾಜು ಯೋಜನೆ ಮಂಜೂರಾಗಿರುವುದರಿಂದ ಸದರ ಯೋಜನೆಗೆ ಪ್ರಾರಂಭಿಸಲು ಕೆ.ಪಿ.ಟಿ.ಸಿ.ಎಲ್ ಇಲಾಖೆಗೆ ಡಿಪಾಜಿಟ್ ಹಾಗೂ ಟಾನ್ಸಫಾರ್ಮರ ಕೂಡ್ರಿಸಲು ಕೆ.ಪಿ.ಟಿ.ಸಿ.ಎಲ್ ಇವರ ಅಂದಾಜು ಪತ್ರಿಕೆ ರೂ. 1,66,609=00 ಸಭೆಯು ಪರಿಶೀಲಿಸಿತು. ಸದರ ಕಾಮಗಾರಿಯನ್ನು ಮಾಡಿರುವ ಜೈನ್ ಇಲೆಕ್ಟ್ರಿಕಲ್ಸ ಅಂಕೋಲಾ ರವರಿಂದ ಬಂದ ಬಿಲ್ಲು ರೂ. 1,66,609=00 ವನ್ನು ಪಾವತಿಸಲು ಸಭೆಯು ಒಪ್ಪಿಗೆ ನೀಡಿ ಠರಾವ ಪಾಸಾಯಿತು.

ಅಧ್ಯಕ್ಷರು,
ಪಟ್ಟಣ ಪಂಚಾಯತ ಅಂಕೋಲಾ